




ವ್ಯಾಪಕ ಸ್ವೀಕೃತಿಯಲ್ಲಿ ಪ್ರಮುಖ ಪಾತ್ರ ವಹಿಸಿತು. ಈ ಕಾಲಘಟ್ಟದ ವಿವರಗಳು ಮೂರನೆಯ ವಿಭಾಗದಲ್ಲಿವೆ. ಸುಧಾರಿತ ಎಂಜಿನ್ ತಂತ್ರಜ್ಞಾನ ಹಾಗೂ ಹಗುರ ಮಿಶ್ರಲೋಹಗಳ ಬಳಕೆಯಿಂದ ಅಧಿಕ ಕ್ಷಮತೆಯ ಮತ್ತು ಐಷಾರಾಮಿ ಕಾರುಗಳ ಉತ್ಪಾದನೆ ಮಹತ್ವ ಪಡೆಯಲಾರಂಭಿಸಿತು. ಈ ಬೆಳವಣಿಗೆಗಳನ್ನು ನಾಲ್ಕನೆಯ ವಿಭಾಗದಲ್ಲಿ ದಾಖಲಿಸಲಾಗಿದೆ.

ಉತ್ಕೃಷ್ಟತೆಯನ್ನು ನಿರ್ಧರಿಸಲು ಮೋಟಾರುವಾಹನಗಳ ನಡುವೆ ಸ್ಪರ್ಧೆ ಆರಂಭವಾಯಿತು. ಇದು ವಾಹನಗಳ ಕ್ಷಮತೆಯನ್ನು ಹೆಚ್ಚಿಸಲು ಪ್ರೇರಕವಾಯಿತು; ಸಂಶೋಧನೆ ಹಾಗೂ ಅಭಿವೃದ್ಧಿಗೆ ಆದ್ಯತೆ ದೊರಕುವಲ್ಲಿ ನೆರವಾಯಿತು. ಕೆಲವು ಕಂಪನಿಗಳು ಕ್ರೀಡೆಗೆಂದೇ ಮೀಸಲಾದ ಕಾರುಗಳ ಉತ್ಪಾದನೆಗೆ ಮುಂದಾದವು. ಐದನೆಯ ವಿಭಾಗ ಈ ಬೆಳವಣಿಗೆಯ ಪರಿಚಯ ಮಾಡಿಕೊಡುತ್ತದೆ.

ನೂತನ ಶೈಲಿಯ ಸುಚಲನಾಕೃತಿ ವಿನ್ಯಾಸದ ಕಾರುಗಳು ಆಕರ್ಷಣೆಯ ಕೇಂದ್ರಗಳಾದವು. ಜಪಾನಿನ ವಾಹನ ತಯಾರಕರು ಇದನ್ನು ತ್ವರಿತ ಗತಿಯಲ್ಲಿ ಅಳವಡಿಸಿಕೊಳ್ಳಲು ಮುಂದಾದರು. ಜಪಾನಿನ 1923ರ ಭೂಕಂಪ ಟೋಕಿಯೊ ನಗರದ ಸಾರ್ವಜನಿಕ ಸಾರಿಗೆಯನ್ನು ಅಸ್ತವ್ಯಸ್ತಗೊಳಿಸಿತು. ಆಗ 800 'ಫೋರ್ಡ್ ಮಾಡೆಲ್–ಟಿ' ವಾಹನಗಳನ್ನು ಆಮದು ಮಾಡಿಕೊಂಡು, ಬಸ್‌ಗಳನ್ನಾಗಿ ಪರಿವರ್ತಿಸಿ ಪರಿಸ್ಥಿತಿಯನ್ನು ನಿಭಾಯಿಸಲಾಯಿತು. ಇದರಿಂದ ಸಂತುಷ್ಟರಾದ ಅಲ್ಲಿನ ನಾಗರಿಕರು ಮೋಟಾರುವಾಹನಗಳ ಬಳಕೆಯನ್ನು ಬೆಂಬಲಿಸಿದರು. ಜಪಾನ್ ಸರ್ಕಾರವೂ ವಾಹನಗಳ ಉತ್ಪಾದನೆಗೆ ಬೆಂಬಲ ನೀಡಲಾರಂಭಿಸಿತು. ಆರನೆಯ ವಿಭಾಗ ಇವುಗಳ ಚಿತ್ರಣ ನೀಡುತ್ತದೆ.

ಮುಂದಿನ ವಿಭಾಗವು ಯೂರೋಪ್ ಮತ್ತು ಅಮೆರಿಕದಲ್ಲಿ ಕಂಡುಬಂದ ಮೋಟಾರು ಸಂಸ್ಕೃತಿಯ ವೈವಿಧ್ಯತೆಯ ವಿಕಸನವನ್ನು ತಿಳಿಸಿಕೊಡುತ್ತದೆ. ದ್ವಿತೀಯ ವಿಶ್ವ ಸಮರದ ನಂತರದಲ್ಲಿ ಯುದ್ಧ ಬಳಕೆಯ ಸಾಮಗ್ರಿಗಳನ್ನು ಉತ್ಪಾದಿಸುತ್ತಿದ್ದ ಕಾರ್ಖಾನೆಗಳು ಸಹ ನಾಗರಿಕರ



ಬಳಕೆಗೆಂದು ವಿಶಿಷ್ಟ ಶೈಲಿಯ ವಾಹನಗಳನ್ನು ತಯಾರಿಸಲಾರಂಭಿಸಿದವು. ಮುಂಬರುವ ಕಾರುಗಳ ವಿನ್ಯಾಸಕ್ಕೆ ಹೊಸ ವ್ಯಾಖ್ಯೆ ಬರೆದ ಆ ಆವಿಷ್ಕಾರಗಳ ಪರಿಚಯವಾಗುವುದು ಎಂಟನೆಯ ವಿಭಾಗದಲ್ಲಿ.

ಅಮೆರಿಕದ ದೊಡ್ಡ, ಐಷಾರಾಮಿ ಹಾಗೂ ಯೂರೋಪ್‌ನ ಕಾಂಪ್ಯಾಕ್ಟ್ ಕಾರುಗಳನ್ನು ಮೂರನೆಯ ಮಹಡಿಯಲ್ಲಿನ ಒಂಬತ್ತನೆಯ ವಿಭಾಗದಲ್ಲಿ ಕಾಣಬಹುದು. ಆರ್ಥಿಕ ಬೆಳವಣಿಗೆಯಿಂದ ಮೋಟಾರುವಾಹನ ಉದ್ಯಮದ ವಿಸ್ತರಣೆ ತ್ವರಿತಗೊಂಡಿತು. ಇದರ ಪರಿಣಾಮವಾಗಿ ರಸ್ತೆಗಿಳಿದ ವಿವಿಧ ಮಾದರಿಯ ಕಾರುಗಳನ್ನೊಳಗೊಂಡಿದೆ, ಹತ್ತನೆಯ ವಿಭಾಗ. ನಂತರದ ವಿಭಾಗದಲ್ಲಿ, ಸಾಮಾಜಿಕ ಕಾಳಜಿಗಳಾದ ಸುರಕ್ಷತೆ ಮತ್ತು ಪರಿಸರ ಮಾಲಿನ್ಯ ಒಡ್ಡಿದ ಸವಾಲುಗಳನ್ನು ಎದುರಿಸಲು ಸಿದ್ಧವಾದ ಆಟೊಮೊಬೈಲ್ ಕ್ಷೇತ್ರದ ಪ್ರಗತಿ ಅನಾವರಣಗೊಳ್ಳುತ್ತದೆ. ಗ್ರಾಹಕರ ಬೇಡಿಕೆಗಳನ್ನು ಪೂರೈಸಲು ಆವಿಷ್ಕಾರಗೊಂಡ ವ್ಯಾನ್‌ಗಳು, ಬಹುಪಯೋಗಿ ವಾಹನಗಳು ಹನ್ನೆರಡನೆಯ ವಿಭಾಗದಲ್ಲಿವೆ.

1990ರಿಂದ ಈಚೆಗೆ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನವೀನ ತಂತ್ರಜ್ಞಾನದ ಪರಿಸರಸ್ನೇಹಿ ವಾಹಗಳ ವಿನ್ಯಾಸ ಪ್ರಾಮುಖ್ಯತೆ ಪಡೆಯಲಾರಂಭಿಸಿತು. ಈ ಆಶಯವನ್ನು ಈಡೇರಿಸಲು ರೂಪುಗೊಂಡ ನೂತನ ವಾಹನಗಳು ಪ್ರದರ್ಶನಗೊಂಡಿರುವುದು ಅಂತಿಮ ವಿಭಾಗದಲ್ಲಿ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಟೊಯೋಟ ಸೇರಿದಂತೆ ವಾಹನೋದ್ಯಮದ ದಿಗ್ಗಜಗಳೆನಿಸಿರುವ ಫೋರ್ಡ್, ಷವರ್ಲೆ, ಡೈಮ್ಲರ್, ನಿಸ್ಸಾನ್, ದೈಹಾತ್ಸು, ಮಾರಿಸ್, ಮಿತ್ಸುಬಿಷಿ, ಮಾಜ್ಡ, ರೋಲ್ಸ್ ರಾಯ್ಸ್, ಸುಬಾರು, ವಿಲ್ಲಿಸ್, ಇತ್ಯಾದಿ ಕಂಪನಿಗಳ ವಿವಿಧ ಕಾಲಘಟ್ಟಗಳ ವಾಹನಗಳು ಇಲ್ಲಿ ಪ್ರದರ್ಶನಗೊಂಡಿವೆ. ಕಾರ್ಖಾನೆಗಳಲ್ಲಿ ವಾಹನ ತಯಾರಿಕೆಯ ಪ್ರಮುಖ ಹಂತಗಳು ಹಾಗು ಸೇವಾಕೇಂದ್ರಗಳ ಕಾರ್ಯವಿಧಾನಗಳನ್ನು ತಿಳಿಸುವ ಮಾದರಿಗಳೂ ಇಲ್ಲಿವೆ.

ಇಷ್ಟೇ ಅಲ್ಲದೆ 8250 ಚದರ ಮೀಟರ್ ಅಂಗಳದಲ್ಲಿರುವ ಸಾಂಸ್ಕೃತಿಕ ಗ್ಯಾಲರಿಯಲ್ಲಿ ವಾಹನಕ್ಷೇತ್ರಕ್ಕೆ ಸಂಬಂಧಿಸಿದ 4000ಕ್ಕೂ ಅಧಿಕ ದರ್ಶಿಕೆಗಳಲ್ಲಿ ಕಿರುಗಾತ್ರದ ಕಾರುಗಳು, ಭಿತ್ತಿಚಿತ್ರಗಳು, ಲಾಂಛನಗಳು, ಇತ್ಯಾದಿಗಳು ಸೇರಿವೆ. ಗ್ರಂಥಾಲಯ, ಮ್ಯೂಸಿಯಂ ಸ್ಟೋರ್ಸ್, ಮತ್ತು ಕೆಫೆ ಕೂಡ ಅಲ್ಲಿವೆ.

ಸೋಮವಾರ ವಿರಾಮ. ಇತರ ದಿನಗಳಲ್ಲಿ ಬೆಳಗಿನ 9.30ರಿಂದ ಸಂಜೆ 5ರವರೆಗೆ ಈ ಸಂಗ್ರಹಾಲಯವನ್ನು ವೀಕ್ಷಿಸಬಹುದು. ಪ್ರವೇಶ ಶುಲ್ಕ ವಯಸ್ಕರಿಗೆ 1000 ಯೆನ್. ಹಿರಿಯ ನಾಗರಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ರಿಯಾಯಿತಿ ಉಂಟು.